ಶಾಲಾ ಶಿಕ್ಷಣ ಇಲಾಖೆ

ನನ್ನ ಹೆಮ್ಮೆಯ ಕನ್ನಡ

# ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ

ಕನ್ನಡವೇ ಸತ್ಯ ಕನ್ನಡವೇ ನಿತ್ಯ

## ೯ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ-೧





**9ನೇ ತರಗತಿ**

**ಸಂಕಲನಾತ್ಮಕ ಮೌಲ್ಯಮಾಪನ-1**

**ಪ್ರಶ್ನೆ ಪತ್ರಿಕೆ & ಮಾದರಿ ಉತ್ತರ ಸೂಚಿ**

## ಪ್ರಥಮ ಭಾಷೆ ಕನ್ನಡ

ಗುಡ್ಡಪ್ಪ.ಎಂ.ಎಚ್ ಸಹ ಶಿಕ್ಷಕರು
ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ
8105599103

# 9ನೇ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ 2025–26

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 12 |
| 2 | ಗ್ರಹಿಕೆ | 36 | 36 | 21 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಅತಿ ಕಿರು ಉತ್ತರ – 1 (ಒಂದು ಅಂಕದ ಪ್ರಶ್ನೆಗಳು) | 07 | 07 | 07 |
| 3 | ಕಿರು ಉತ್ತರ – 2 (ಎರಡು ಅಂಕಗಳ ಪ್ರಶ್ನೆಗಳು) | 20 | 20 | 10 |
| 4 | ದೀರ್ಘ ಉತ್ತರ – 1 (ಮೂರು ಅಂಕಗಳ ಪ್ರಶ್ನೆಗಳು) | 33 | 33 | 11 |
| 5 | ದೀರ್ಘ ಉತ್ತರ – 2 (ನಾಲ್ಕು ಅಂಕಗಳ ಪ್ರಶ್ನೆಗಳು) | 20 | 20 | 05 |
| 6 | ದೀರ್ಘ ಉತ್ತರ – 3 (ಐದು ಅಂಕಗಳ ಪ್ರಶ್ನೆಗಳು) | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 40 | 40 | 24 |
| 2 | ಸಾಧಾರಣ | 50 | 50 | 18 |
| 3 | ಕಠಿಣ | 10 | 10 | 03 |
| | **ಒಟ್ಟು** | **100** | **100** | **45** |

❖ **ಹಂತ : 4 (ಎ): ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ (ಬಿ) : ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಪ್ರಜಾನಿಷ್ಠೆ | 07 | 03 |
| 2 | ಬೆಡಗಿನ ತಾಣ ಜಯಪುರ | 07 | 03 |
| 3 | ರಾಮರಾಜ್ಯ | 06 | 03 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | 08 | 04 |
| | ಗದ್ಯ ಒಟ್ಟು | 28 | 13 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಪಾರಿವಾಳ | 08 | 03 |
| 2 | ಹೊಸಹಾಡು | 09 | 03 |
| 3 | ಚಕ್ರ ಗ್ರಹಣ | 06 | 03 |
| 4 | ಬಲಿಯನಿತ್ತೊಡೆ ಮುನಿವೆಂ | 07 | 02 |
| | ಪದ್ಯ ಒಟ್ಟು | 30 | 11 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಪುಟ್ಟಹಕ್ಕಿ | 02 | 01 |
| 2 | ಚೆನ್ನಭೈರಾದೇವಿ | 03 | 02 |
| 3 | ಸಿರಿಯನಿನ್ನೇನ ಬಣ್ಣಿಪೆನು | 04 | 02 |
| | ಪದ್ಯ ಒಟ್ಟು | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಅಪಠಿತ ಗದ್ಯ | 04 | 01 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ಲೇಖನ | 05 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 15 |

# 9ನೆಯ ತರಗತಿ–ಸಂಕಲನಾತ್ಮಕ ಮೌಲ್ಯಮಾಪನ–1, ಪ್ರಥಮ ಭಾಷೆ ಕನ್ನಡ–ನೀಲ ನಕಾಶೆ.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಪ್ರಜಾನಿಷ್ಠೆ | ** | 1(1) | ** | ** | ** | ** | 1(2) | ** | ** | ** | ** | 1(4) | ** | ** | ** | 1(1) | 1(2) | ** | 1(4) | ** | 07 | 03 |
| 2 | ಬೆಡಗಿನ ತಾಣ ಜಯಪುರ | ** | 1(1) | 1(3) | ** | ** | ** | ** | ** | ** | ** | 1(3) | ** | ** | ** | ** | 1(1) | ** | 2(3) | ** | ** | 07 | 03 |
| 3 | ರಾಮರಾಜ್ಯ | ** | ** | ** | ** | ** | 1(1) | 1(2) | ** | ** | ** | 1(3) | ** | ** | ** | ** | 1(1) | 1(2) | 1(3) | ** | ** | 06 | 03 |
| 4 | ಆದರ್ಶ ಶಿಕ್ಷಕ ಸರ್ವೆಪಲ್ಲಿ ರಾಧಾಕೃಷ್ಣನ್ | ** | 1(1) | ** | ** | ** | ** | 2(2) | ** | ** | ** | 1(3) | ** | ** | ** | ** | 1(1) | 2(2) | 1(3) | ** | ** | 08 | 04 |
| | ಗದ್ಯ ಒಟ್ಟು | ** | 3(1) | 1(3) | ** | ** | 1(1) | 4(2) | ** | ** | ** | 3(3) | 1(4) | ** | ** | ** | 4(1) | 4(2) | 4(3) | 1(4) | ** | 28 | 13 |
| 1 | ಪಾರಿವಾಳ | ** | 1(1) | ** | 1(4) | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | 1(4) | ** | 08 | 03 |
| 2 | ಹೊಸಹಾಡು | ** | ** | 1(3) | ** | ** | ** | 1(2) | ** | ** | ** | ** | ** | ** | 1(4) | ** | ** | 1(2) | 1(3) | 1(4) | ** | 09 | 03 |
| 3 | ಚಕ್ರ ಗ್ರಹಣ | ** | ** | ** | | ** | 1(1) | 1(2) | ** | ** | ** | 1(3) | ** | ** | ** | ** | 1(1) | 1(2) | 1(3) | ** | ** | 06 | 03 |
| 4 | ಬಲಿಯನಿತ್ತೊಡೆ ಮುನಿವೆಂ | ** | ** | ** | ** | ** | ** | ** | ** | ** | ** | 1(3) | ** | 1(4) | ** | ** | ** | ** | 1(3) | 1(4) | ** | 07 | 02 |
| | ಪದ್ಯ ಒಟ್ಟು | ** | 1(1) | 1(3) | 1(4) | ** | 1(1) | 2(2) | ** | ** | ** | 3(3) | 1(4) | ** | 1(4) | ** | 2(1) | 2(2) | 4(3) | 3(4) | ** | 30 | 11 |
| 1 | ಪುಟ್ಟಹಕ್ಕಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 2 | ಚೆನ್ನಭೈರಾದೇವಿ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 3 | ಸಿರಿಯನಿನ್ನೇನ ಬಣ್ಣಿಪೆನು | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| | ಪಠ್ಯಪೋಷಕ ಅಧ್ಯಯನ ಒಟ್ಟು | ** | 1(1) | ** | ** | ** | ** | 4(2) | ** | ** | ** | ** | ** | * * | ** | ** | 1(1) | 4(2) | ** | ** | ** | 09 | 05 |
| 1 | ಅಪಠಿತ ಗದ್ಯ | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | 1(4) | ** | 04 | 01 |

| ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ, ವಾಕ್ಯರಚನೆಗಳು | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | **6(1))** | ** | ** | ** | **4(1)** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ಒಟ್ಟು** | **6(1)** | ** | ** | ** | **4(1)** | ** | ** | **2(3)** | ** | ** | **1(3)** | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **6(1)** | **7(1)** | ** | **1(4)** | **4(1)** | ** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **14– 21** | | | | **19– 36** | | | | | **11 – 39** | | | | **01 – 04** | **45 – 100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# 9ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ–1 2025

# 9TH STANDARD SUMMATIVE ASSESSMENT-1 2025

## ವಿಷಯ : ಪ್ರಥಮ ಭಾಷೆ–ಕನ್ನಡ

## Subject : First Language — KANNADA

**ದಿನಾಂಕ : /09/2025** — **ವಿಷಯ ಸಂಕೇತ : 01K**

**ಸಮಯ : 3 ಗಂಟೆ 15 ನಿಮಿಷ** — **ಗರಿಷ್ಠ ಅಂಕಗಳು : 100**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. ಕನ್ನಡ ವರ್ಣ ಮಾಲೆಯಲ್ಲಿರುವ ಹ್ರಸ್ವರಗಳಿವು

(ಎ) ಆ, ಈ, ಊ, ಏ, ಓ, ಔ  (ಬಿ) ಅ, ಇ, ಉ, ಋ, ಎ, ಒ

(ಸಿ) ಕ, ಚ, ಟ, ತ, ಪ  (ಡಿ) ಙ, ಞ, ಣ, ನ, ಮ

2. 'ಬಣ್ಣಗೆಟ್ಟಿತ್ತು' ಪದವು ಕನ್ನಡದ ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಲೋಪಸಂಧಿ  (ಬಿ) ಆಗಮಸಂಧಿ

(ಸಿ) ಆದೇಶ ಸಂಧಿ  (ಡಿ) ಅನುನಾಸಿಕ ಸಂಧಿ

3. 'ತಲಕಾಡುಗೊಂಡನಿಗೆ ಜಯವಾಗಲಿ' .–ಈ ವಾಕ್ಯದಲ್ಲಿ 'ಜಯವಾಗಲಿ' ಪದವು.

(ಎ) ನಿಷೇಧಾರ್ಥಕ ಕ್ರಿಯಾಪದ  (ಬಿ) ಸಂಭಾವನಾರ್ಥಕ ಕ್ರಿಯಾಪದ

(ಸಿ) ನಕಾರಾತ್ಮಕ ಕ್ರಿಯಾಪದ  (ಡಿ) ವಿಧ್ಯರ್ಥಕ ಕ್ರಿಯಾಪದ

4. 'ಹೆಮ್ಮರ' ಪದವು ಸಮಾಸದ ಈ ಪ್ರಕಾರಕ್ಕೆ ಉದಾಹರಣೆಯಾಗಿದೆ.

(ಎ) ತತ್ಪುರುಷ ಸಮಾಸ  (ಬಿ) ದ್ವಿಗು ಸಮಾಸ

(ಸಿ) ಕರ್ಮಧಾರಯ ಸಮಾಸ  (ಡಿ) ಕ್ರಿಯಾ ಸಮಾಸ

5. 'ಎದ್ದೇಳು ಪುಟ್ಟ 'ಬೇಗಬೇಗ' ಸಿದ್ಧನಾಗು. –ಈ ವಾಕ್ಯದಲ್ಲಿರುವ 'ಬೇಗಬೇಗ' ಪದವು

(ಎ) ಜೋಡಿಪದ  (ಬಿ) ದ್ವಿರುಕ್ತಿ

(ಸಿ) ನುಡಿಗಟ್ಟು  (ಡಿ) ಅನುಕರಣಾವ್ಯಯ

6. ಭಾರತೀಯ ವಿದ್ಯಾಭವನದ 'ಬ್ರಹ್ಮವಿದ್ಯಾಭಾಸ್ಕರ' ಬಿರುದಿಗೂ ಪಾತ್ರರಾದರು.–ಗೆರೆ ಎಳೆದ ಪದದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ.

(ಎ) ಉದ್ಧರಣ  (ಬಿ) ವಾಕ್ಯವೇಷ್ಟನ

(ಸಿ) ಆವರಣ  (ಡಿ) ಅಲ್ಪವಿರಾಮ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ**

ಪದವನ್ನು ಬರೆಯಿರಿ. **4*1=4**

7. ಹರ್ಷ : ಹರುಷ : : ಪರೀಕ್ಷಿಸು : ______________

8. ಮ್ಯಾಲೆ : ಮೇಲೆ : : ಇಚಾರಾ : ____________________

9. ಮನುಷ್ಯ : ರೂಢನಾಮ : : ವಿದ್ಯಾರ್ಥಿ : ________________

10. ಸಪ್ತಮಿ : ಅಧಿಕರಣ : : ಭಿಕ್ಷೆಗೆ : _____________________

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **7*1=7**

11. ಚೋಳರು ಮತ್ತು ಹೊಯ್ಸಳರ ನಡುವೆ ಯುದ್ಧ ಎಲ್ಲಿ ನಡೆಯಿತು?
12. ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ?
13. ಬುದ್ಧಿಶಾಲಿಯಾದ ರಾಜನು ಪ್ರಜೆಗಳನ್ನು ಹೇಗೆ ಪಾಲಿಸಬೇಕು?
14. ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆ ಏನಾಗಿತ್ತು?
15. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು?
16. ಭೀಷ್ಮರು ಕೃಷ್ಣನಿಗೆ 'ಎನಗೆ ನಗೆಯು ಬಂತು' ಎಂದು ಹೇಳಲು ಕಾರಣವೇನು?
17. ಪೋರ್ಚುಗೀಸರು ಚೆನ್ನಭೈರಾದೇವಿಗೆ ನೀಡಿದ ಬಿರುದು ಯಾವುದು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

18. ಅವಳಿ ದೇಗುಲಗಳ ವೈಶಿಷ್ಟ್ಯತೆಯೇನು?
19. ದೂತನು ಹೇಗಿರಬೇಕು?
20. ಸ್ಟಾಲಿನ್‌ರವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?
21. ಶಿಕ್ಷಣದ ಮಹತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?
22. ಭೀಷ್ಮರು ಕೃಷ್ಣನ ಕೈಹಿಡಿದು ಏನೆಂದು ನಿವೇದಿಸಿಕೊಂಡರು?
23. ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ?
24. ಪುಟ್ಟಹಕ್ಕಿ ಯಾರನ್ನು ಸ್ವಾಗತಿಸುತ್ತದೆ? ಜಗದ ಜನರ ಬಗೆಗೆ ಪುಟ್ಟಹಕ್ಕಿಯ ಮಾತೇನು?
25. ಶಬಲೆ ಹೇಳಿದಂತೆ ಪೋರ್ಚುಗೀಸರು ಯಾವ ಕಾರಣಗಳಿಗಾಗಿ ಯುದ್ಧಕ್ಕೆ ಸಿದ್ಧರಾಗಿದ್ದರು?
26. ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು?
27. ಭರತಚಕ್ರವರ್ತಿ ಓಲಗಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ.

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

28. ಶಿವರಾಮ ಕಾರಂತ

29. ಕಯ್ಯಾರ ಕಿಞ್ಞಣ್ಣ ರೈ

VI. **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ಕಾವೇರಿಯಿಂದ ಮಾಗೋ

ದಾವರಿವರಮಿರ್ದನಾಡದಾ ಕನ್ನಡದೊಳ್

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1*3=3**

31. **"**ಸೀತೆಯ ಮುಖ ಕಮಲ ಅರಳಿತು**"**

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

32. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

**ಅಥವಾ**

ಬೆಳ್ಳಗಿರುವುದೆಲ್ಲ ಹಾಲಲ್ಲ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

33. "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು."

34. "ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತ ಲೇಸು"

35. "ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ"

36. "ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ"

37. "ಉಭಯ ಪಕ್ಷದಲ್ಲಿ ನಿಮಗೆ ಭೇದವೆ"

38. "ಬಲಿಯನಿತ್ತೊಡೆ ಮುನಿವೆಂ"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*4=4**

39. ದಟ್ಟ ______________________________

______________________________

______________________________ಜೋಡಿ

**ಅಥವಾ**

ಹಗಲಿರುಳು ______________________________

______________________________

______________________________ ಬಂದು

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ.** **1*4=4**

40. ಜಯಜನನಿ ಶಿರವೆತ್ತಿ ವೀರಭರವಸೆಯಿಂದ

ಹೊಸಹಾಡ ಕೇಳಿ ನೋಡು;

ಇದೋ ಮೊದಲು ಮುನ್ನಿಲ್ಲ-ಮುಗಿದುದಂದಿನ ಪಾಡು

ಹೊಸತಿಂದು ಹೊಸತು ಹಾಡು;

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ಚೋಳದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ. ***ಅಥವಾ***

ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.

42. ಅಭಯರುಚಿಯ ಮಾತುಗಳು ಮಾರಿದತ್ತನ ಮೇಲೆ ಬೀರಿದ ಪರಿಣಾಮವನ್ನು ತಿಳಿಸಿ.?

ಅಥವಾ

ಅಭಯರುಚಿ ಮತ್ತು ಮಾರಿದತ್ತರಲ್ಲಿ ಯಾರನ್ನು ಮೆಚ್ಚುವಿರಿ?ಏಕೆ?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)**

43. ಬಸಯ್ಯ ಕಡು ಬಡತನದ ಯುವಕ. ಅವನಿಗೆ ರೈತನಾಗಬೇಕೆಂಬ ಬಯಕೆ. ತಂದೆಯಿಂದ ಬಂದ ಎರಡು ಎಕರೆ ಭೂಮಿಯಿತ್ತು. ಅದೂ ಬಂಜರು, ಗುಡ್ಡಗಳಿಂದ ಕೂಡಿದ ಭೂಮಿ. ನೀರಾವರಿ ಸೌಲಭ್ಯಗಳಿಲ್ಲ. ಆದರೂ ಸಾಧಿಸುವ ಛಲವಿತ್ತು. ತನ್ನ ಭೂಮಿಯಲ್ಲಿದ್ದ ಗಿಡಗಂಟಿಗಳನ್ನು ತೆಗೆದ. ಅಲ್ಲಲ್ಲಿ ಇದ್ದ ಸಣ್ಣ ಪುಟ್ಟ ಬಂಡೆಗಲ್ಲುಗಳನ್ನು ಒಡೆಸಿ ಹೊರಹಾಕಿದ. ನೇಗಿಲಿನಿಂದ ಉಳುಮೆ ಮಾಡಿದ. ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿಯನ್ನು ಹದ ಮಾಡಿದನು.

ಮಳೆಗಾಲದಲ್ಲಿ ತನ್ನ ಭೂಮಿಯ ಪಕ್ಕದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕಂಡನು. ಸರ್ಕಾರದಿಂದ ಹಣ ಸಹಾಯ ಪಡೆದು ಹೊಂಡ ತೆಗೆಸಿದ. ಮಳೆನೀರನ್ನು ಸಂಗ್ರಹಿಸಿದ. ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿದ. ಸಂಗ್ರಹಿಸಿದ ಮಳೆ ನೀರಿಗೆ ಹನಿ ನೀರಾವರಿ ಅಳವಡಿಸಿದನು. ವಿವಿಧ ಬೆಳೆ ಪದ್ಧತಿ ಅಳವಡಿಸಿಕೊಂಡನು. ದಾಳಿಂಬೆ, ಸಪೋಟ. ತೆಂಗು, ಹೂಬೆಳೆಗಳನ್ನು ಬೆಳೆದನು. ಅಧಿಕ ಇಳುವರಿ ಪಡೆದನು. ಸುತ್ತಮುತ್ತಲಿನ ರೈತರು ಇವನ ಸಾಹಸ ಕಂಡು ಬೆರಗಾದರು. ಬಸಯ್ಯನ ಸಾಧನೆ ಕಂಡು ಸರ್ಕಾರ 'ಕೃಷಿ ಪಂಡಿತ' ಪ್ರಶಸ್ತಿ ನೀಡಿ ಗೌರವಿಸಿತು.

**ಪ್ರಶ್ನೆಗಳು :**

ಅ) ಬಸಯ್ಯ ಭೂಮಿಯನ್ನು ಹೇಗೆ ಹದಗೊಳಿಸಿದನು?

ಆ) ಬಸಯ್ಯ ಹೇಗೆ ಅಧಿಕ ಇಳುವರಿ ಪಡೆದನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ, ಬೀದರ್‌ನ 'ಮೋಹನ್/ಮೋನಿಕಾ' ಎಂಬ ವಿದ್ಯಾರ್ಥಿ ಎಂದು ಭಾವಿಸಿಕೊಂಡು ನಿನ್ನ ವಾರ್ಷಿಕ ಪರೀಕ್ಷೆ ಸಿದ್ಧತೆ ಕುರಿತು ಚಾಮರಾಜನಗರದಲ್ಲಿರುವ ನಿಮ್ಮ ತಾಯಿಯವರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಶಿವಮೊಗ್ಗದ ಮೊರಾರ್ಜಿ ಪ್ರೌಢಶಾಲೆಯ 'ವಿಜಯ' ಎಂಬ ವಿದ್ಯಾರ್ಥಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಕುರಿತು ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. 1*5=5**

45. ನಿರುದ್ಯೋಗ **ಅಥವಾ** ರಾಷ್ಟ್ರೀಯ ಭಾವೈಕ್ಯತೆ

# 9ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ–1 2025

## 9TH STANDARD SUMMATIVE ASSESSMENT-1 2025

## ವಿಷಯ : ಪ್ರಥಮ ಭಾಷೆ–ಕನ್ನಡ

## Subject : First Language — KANNADA

ದಿನಾಂಕ : /09/2025 ವಿಷಯ ಸಂಕೇತ : 01K

ಸಮಯ : 3 ಗಂಟೆ 15 ನಿಮಿಷ **ಮಾದರಿ ಉತ್ತರ ಸೂಚಿ** ಗರಿಷ್ಠ ಅಂಕಗಳು : 100

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6**

**1. ಕನ್ನಡ ವರ್ಣ ಮಾಲೆಯಲ್ಲಿರುವ ಹ್ರಸ್ವರಗಳಿವು**

(ಎ) ಆ, ಈ, ಊ, ಏ, ಓ, ಔ
(ಬಿ) ಅ, ಇ, ಉ, ಋ, ಎ, ಒ
(ಸಿ) ಕ, ಚ, ಟ, ತ, ಪ
(ಡಿ) ಙ, ಞ, ಣ, ನ, ಮ

**2. 'ಬಣ್ಣಗೆಟ್ಟಿತ್ತು' ಪದವು ಕನ್ನಡದ ಈ ಸಂಧಿಗೆ ಉದಾಹರಣೆಯಾಗಿದೆ**

(ಎ) ಲೋಪಸಂಧಿ
(ಬಿ) ಆಗಮಸಂಧಿ
(ಸಿ) ಆದೇಶ ಸಂಧಿ
(ಡಿ) ಅನುನಾಸಿಕ ಸಂಧಿ

**3. 'ತಲಕಾಡುಗೊಂಡನಿಗೆ ಜಯವಾಗಲಿ' .–ಈ ವಾಕ್ಯದಲ್ಲಿ 'ಜಯವಾಗಲಿ' ಪದವು.**

(ಎ) ನಿಷೇಧಾರ್ಥಕ ಕ್ರಿಯಾಪದ
(ಬಿ) ಸಂಭಾವನಾರ್ಥಕ ಕ್ರಿಯಾಪದ
(ಸಿ) ನಕಾರಾತ್ಮಕ ಕ್ರಿಯಾಪದ
(ಡಿ) ವಿಧ್ಯರ್ಥಕ ಕ್ರಿಯಾಪದ

**4. 'ಹೆಮ್ಮರ' ಪದವು ಸಮಾಸದ ಈ ಪ್ರಕಾರಕ್ಕೆ ಉದಾಹರಣೆಯಾಗಿದೆ.**

(ಎ) ತತ್ಪುರುಷ ಸಮಾಸ
(ಬಿ) ದ್ವಿಗು ಸಮಾಸ
(ಸಿ) ಕರ್ಮಧಾರಯ ಸಮಾಸ
(ಡಿ) ಕ್ರಿಯಾ ಸಮಾಸ

**5. 'ಎದ್ದೇಳು ಪುಟ್ಟ 'ಬೇಗಬೇಗ' ಸಿದ್ಧನಾಗು. –ಈ ವಾಕ್ಯದಲ್ಲಿರುವ 'ಬೇಗಬೇಗ' ಪದವು**

(ಎ) ಜೋಡಿಪದ
(ಬಿ) ದ್ವಿರುಕ್ತಿ
(ಸಿ) ನುಡಿಗಟ್ಟು
(ಡಿ) ಅನುಕರಣಾವ್ಯಯ

**6. ಭಾರತೀಯ ವಿದ್ಯಾಭವನದ 'ಬ್ರಹ್ಮವಿದ್ಯಾಭಾಸ್ಕರ' ಬಿರುದಿಗೂ ಪಾತ್ರರಾದರು.–ಗೆರೆ ಎಳೆದ ಪದದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ.**

(ಎ) ಉದ್ಧರಣ
(ಬಿ) ವಾಕ್ಯವೇಷ್ಟನ
(ಸಿ) ಆವರಣ
(ಡಿ) ಅಲ್ಪವಿರಾಮ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4**

7. ಹರ್ಷ : ಹರುಷ : : ಪರೀಕ್ಷಿಸು : ಪರಿಕಿಸು

8. ಮ್ಯಾಲೆ : ಮೇಲೆ : : ಇಚಾರಾ : ವಿಚಾರ

9. ಮನುಷ್ಯ : ರೂಢನಾಮ : : ವಿದ್ಯಾರ್ಥಿ : ಅನ್ವರ್ಥಕನಾಮ

10. ಸಪ್ತಮಿ : ಅಧಿಕರಣ : : ಭಿಕ್ಷೆಗೆ : ಸಂಪ್ರದಾನ

---

## III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 7*1=7

**11. ಚೋಳರು ಮತ್ತು ಹೊಯ್ಸಳರ ನಡುವೆ ಯುದ್ಧ ಎಲ್ಲಿ ನಡೆಯಿತು?**

❖ ಚೋಳರು ಮತ್ತು ಹೊಯ್ಸಳರ ನಡುವೆ ಮಳವಳ್ಳಿ ಮತ್ತು ಮುಡುಕು ತೊರೆಗಳ ಬಳಿಯಲ್ಲಿ ಯುದ್ಧ ನಡೆಯಿತು.

**12. ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ?**

❖ ಜಯಪುರದ ಜನರಿಗೆ ಕೆಂಪು, ಕಿತ್ತಳೆ ಮತ್ತು ಹಳದಿ ಬಣ್ಣಗಳು ಇಷ್ಟ.

**13. ಬುದ್ಧಿಶಾಲಿಯಾದ ರಾಜನು ಪ್ರಜೆಗಳನ್ನು ಹೇಗೆ ಪಾಲಿಸಬೇಕು?**

❖ ಬುದ್ಧಿಶಾಲಿಯಾದ ರಾಜನು ದಂಡಾಧಿಕಾರಿಯಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಬೇಕು.

**14. ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆ ಏನಾಗಿತ್ತು?**

❖ ದೇಶೀ ಭಾಷೆಯಾಗಿದ್ದ ಸಂಸ್ಕೃತವನ್ನು ಕಲಿಯಲಿ ಎಂಬುದು ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆಯಾಗಿತ್ತು.

**15. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು?**

❖ ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಚೀತ್ಕರಿಸಿದವು.

**16. ಭೀಷ್ಮರು ಕೃಷ್ಣನಿಗೆ 'ಎನಗೆ ನಗೆಯು ಬಂತು' ಎಂದು ಹೇಳಲು ಕಾರಣವೇನು?**

❖ ಭೀಷ್ಮರು ಕೃಷ್ಣನಿಗೆ "ಎನಗೆ ನಗೆಯು ಬಂತು" ಎಂದು ಹೇಳಲು ಕಾರಣ ಹುಲ್ಲುಕಡ್ಡಿಯನ್ನು ಮುರಿಯುವುದಕ್ಕೆ ಕೊಡಲಿಯು ಬೇಕೆ? ನನ್ನನ್ನು ಕೊಲ್ಲಲು ಚಕ್ರಬೇಕೆ? ಅದು ನನ್ನ ದೇಹದಲ್ಲಿನ ಒಂದು ಕೂದಲನ್ನು ಕತ್ತರಿಸಿದರೆ ನಾನು ನಿಮಗೆ ಶರಣಾಗುತ್ತೇನೆ.

**17. ಪೋರ್ಚುಗೀಸರು ಚೆನ್ನಭೈರಾದೇವಿಗೆ ನೀಡಿದ ಬಿರುದು ಯಾವುದು?**

❖ ಹೊಯ್ಸಳ ಸಾಮ್ರಾಜ್ಯದ ಪ್ರಗತಿಯನ್ನು ಕಂಡು ಪರರಾಜರ ಕಣ್ಣುಗಳು ಕಿಸುರಾದವು.

---

## IV. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20

**18. ಅವಳಿ ದೇಗುಲಗಳ ವೈಶಿಷ್ಟ್ಯತೆಯೇನು?**

❖ ಅವಳಿ ದೇಗುಲಗಳು ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿರಬೇಕು. ಆ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಿರಬೇಕು. ವೇಲಾಪುರಿಯ ಚೆನ್ನಕೇಶವ ದೇವಾಲಯದಲ್ಲಿ ಲಾಲಿತ್ಯವಿದ್ದರೆ, ದ್ವಾರಸಮುದ್ರದ ದೇಗುಲದಲ್ಲಿ ಭವ್ಯತೆ ನೆಲೆಗೊಂಡಿರಬೇಕು. ಅಂತಹ ಒಂದು ಕಲಾಪೂರ್ಣ ದೇವಾಲಯಗಳ ನಿರ್ಮಾಣವಾಗಬೇಕು ಎಂಬುದು ಶಾಂತಲೆಯ ಬಯಕೆ.

---

**19. ದೂತನು ಹೇಗಿರಬೇಕು?**

❖ **നമ്മ ದೇಶದಲ್ಲಿ ಹುಟ್ಟಿ ಬೆಳೆದ ವಿದ್ವಾಂಸನನ್ನು** ದೂತನನ್ನಾಗಿ ನೇಮಿಸಿಕೊಳ್ಳಬೇಕು. ದೂತನು **ಕಾರ್ಯ ಸಮರ್ಥನೂ ಪ್ರತಿಭಾಶಾಲಿಯೂ ಆಗಿರಬೇಕು.** ಹೇಳಿ ಕಳಿಸಿದ ಸಂದೇಶವನ್ನಷ್ಟೇ ತಿಳಿಸುವ ಸತ್ಯವಂತನಾಗಿರಬೇಕು. ವ್ಯಕ್ತಿ, ವಸ್ತುಗಳ ಮೌಲ್ಯವನ್ನೂ ಯೋಗ್ಯತೆಯನ್ನೂ ಸರಿಯಾಗಿ ಗುರುತಿಸಬಲ್ಲ ನಿಷ್ಣಾತನಾಗಿರಬೇಕು.

---

**20. ಸ್ಟಾಲಿನ್‌ರವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?**

❖ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ **"ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು."** ನೀವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ ನನಗೆ ಇದು ದುಃಖ ನೀಡಿದೆ. ನೀವು ಹೆಚ್ಚು ಕಾಲ ಬಾಳಬೇಕೆಂಬುದೇ ನನ್ನಾಸೆ. ನಾನು ಹೆಚ್ಚು ಕಾಲ ಬಾಳುವುದಿಲ್ಲ" ಎಂದು ಹೇಳಿದರು.

---

**21. ಶಿಕ್ಷಣದ ಮಹತ್ತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?**

❖ ಶಿಕ್ಷಣದ ಮಹತ್ವವನ್ನು ಮನಗಂಡಿದ್ದ ರಾಧಾಕೃಷ್ಣನ್ ಅವರು **"ಶಿಕ್ಷಣವು ಜೀವನದ ಅವಿಭಾಜ್ಯ ಅಂಗ. ಅದು ಮಾನವನನ್ನು ಪರಿಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ"** ಎಂದಿದ್ದಾರೆ. ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ" ಎಂದು ತಮ್ಮ ನಿಲುವನ್ನು ಅಭಿವ್ಯಕ್ತಿಸಿದರು.

---

**22. ಭೀಷ್ಮರು ಕೃಷ್ಣನ ಕೈಹಿಡಿದು ಏನೆಂದು ನಿವೇದಿಸಿಕೊಂಡರು?**

❖ ಎರಡು ಸೈನ್ಯಗಳು ಬೆರಗಾಗಿ ಕಂಗಾಲಾಗಿರಲು, ಭೀಷ್ಮರು ಬೆದರಿ ರಥದಿಂದಿಳಿದು ಕೃಷ್ಣನ ಬಳಿಗೆ ಬಂದು ಪಾಪಿಗಳಿಗೆ ಕಾಡ್ಗಿಚ್ಚಿನಂತಾದವನೆ**, ಲಕ್ಷ್ಮೀವರನೇ, ಮುಕುಂದ, ಮುರಾರಿ** ಜಯವು ನಿನ್ನದೆ ಎನ್ನುತ್ತಾ ನಮಸ್ಕರಿಸಿ, ಮತ್ತೆ ಎದ್ದು ಕೃಷ್ಣನ ಮೃದುವಾದ ಕೈಯನ್ನು ಹಿಡಿದನು.

---

**23. ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ?**

❖ **ನವಭಾವ ನವಜೀವ ನವಶಕ್ತಿ ತುಂಬಿಸುವ ಹಾಡನ್ನು ಹಾಡಬೇಕು.** ತೀವ್ರತರವಾದ ಗಂಭೀರವಾದ ಭಾವನೆಗಳನ್ನು ಹೊಮ್ಮಿಸುವ ಅದರ ಅಲೆ ಎಲ್ಲಾ ಕಡೆ ಹರಡುವಂತಹ ಹಾಡು ಅದಾಗಿರಬೇಕು. **ಹಾಡು ಬದುಕಿನ ಗತಿಯಲ್ಲಿ ಹೊಸ ಪ್ರಗತಿಪರ ಬದಲಾವಣೆ ತರುವಂತದ್ದಾಗಿರಬೇಕು** ಹೊಸಚೇತನ ತುಂಬಬೇಕು ಅಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಕವಿ ಬಯಸಿದ್ದಾರೆ..

---

**24. ಪುಟ್ಟಹಕ್ಕಿ ಯಾರನ್ನು ಸ್ವಾಗತಿಸುತ್ತದೆ? ಜಗದ ಜನರ ಬಗೆಗೆ ಪುಟ್ಟಹಕ್ಕಿಯ ಮಾತೇನು?**

❖ ಗೀತೆಯನ್ನು ಹಾಡುತ್ತಾ ಪುಟ್ಟಹಕ್ಕಿ **ಸೂರ್ಯನನ್ನು ಸ್ವಾಗತಿಸುತ್ತದೆ.** ಜಗದಲ್ಲಿ ಮೂಡಿದ **ರೆಕ್ಕೆಗಳ ಮುರಿಯುವ ಜನರಿರುವರು** ಎಂದು ಪುಟ್ಟ ಹಕ್ಕಿಯು ಆತಂಕ ಪಡುವುದನ್ನು ಇಲ್ಲಿ ಕಾಣಬಹುದು.

---

**25. ಶಬಲೆ ಹೇಳಿದಂತೆ ಪೋರ್ಚುಗೀಸರು ಯಾವ ಕಾರಣಗಳಿಗಾಗಿ ಯುದ್ಧಕ್ಕೆ ಸಿದ್ಧರಾಗಿದ್ದರು?**

❖ ಶಬಲೆ ಹೇಳಿದಂತೆ ಪೋರ್ಚುಗೀಸರು ಯುದ್ಧಕ್ಕೆ ಸಿದ್ಧರಾಗಿರುವುದು ಎರಡು ಉದ್ದೇಶಕ್ಕೆ. ಒಂದು ನಮಗೆ **ಸಹಾಯ ಮಾಡಿದ ತಪ್ಪಿಗೆ ರೊಜಾರಿಯೋನನ್ನು ಪೋರ್ಚುಗಲ್ಲಿಗೆ ಒಯ್ದು ದಂಡನೆ ನೀಡಲು**. ಇನ್ನೊಂದು ಚೆನ್ನಭೈರಾದೇವಿ ಅವರು **ಮತಾಂತರಕ್ಕಾಗಿ ಬರುವ ಮಿಶನರಿಗಳಿಗೆ ಅವಕಾಶ ನೀಡುತ್ತಿಲ್ಲವೆಂದು** ನಿಮ್ಮನ್ನು ಬಂಧಿಸಿ ಗೋವೆಗೆ ಒಯ್ಯಲು ಸಿದ್ಧರಾಗಿದ್ದರು.

---

**26. ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು?**

❖ ಕವಿ ರತ್ನಾಕರವರ್ಣಿಯು ತಾನು ಬರೆಯುವ ಕಥೆಯನ್ನು **'ಆಹಾ ಬಹಳ ಚೆನ್ನಾಗಿದೆ'** ಎಂದು ಕನ್ನಡಿಗರು, **'ರಯ್ಯಾ ಮಂಚಿದಿ'** ಬಹಳ ಒಳ್ಳೆಯದು ಎಂದು ತೆಲುಗರು, **'ಎಂಚ ಪೊರ್ಲಾಂಡ್'** ಬಹಳ ಚಂದವಾಯಿತು ಎಂದು ತುಳುವರು ಅತ್ಯಾಸಕ್ತಿಯಿಂದ ಕೇಳಿ ಹೊಗಳಬೇಕು ಎಂದು ಬಯಸಿದ್ದಾನೆ.

---

**27. ಭರತಚಕ್ರವರ್ತಿ ಓಲಗಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ.**

❖ ಭರತ ಚಕ್ರವರ್ತಿಯು **ನವರತ್ನ ಹಾಗೂ ಚಿನ್ನದಿಂದ ನಿರ್ಮಿತವಾದ ಆಸ್ಥಾನಭವನದಲ್ಲಿ** ಸ್ವರ್ಗಲೋಕದಲ್ಲಿ **ದೇವೇಂದ್ರನು ರತ್ನಪುಷ್ಪಕದಲ್ಲಿ ಶೋಭಿಸುವಂತೆ** ಕಾಂತಿಯಿಂದ ಶೋಭಿಸುತ್ತಿರುವನು. ಅಲ್ಲದೆ ಚಾಮರಗಳ ಸಾಲಿನಲ್ಲಿ ಭರತಚಕ್ರವರ್ತಿಯು ಆಗಸದಲ್ಲಿ ತೇಲುವ ಬಿಳಿಮೋಡಗಳ ಹಿಂದೆ ಆಗಾಗ ತೋರಿ ಮರೆಯಾಗುವ **ಚಂದ್ರನೋ ಸೂರ್ಯನೋ, ಎಂಬಂತೆ ಕಂಗೊಳಿಸಿದನು.**

---

## V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

**28. ಶಿವರಾಮ ಕಾರಂತ**

❖ ಶಿವರಾಮ ಕಾರಂತರು **ಸಾ.ಶ 1902ರಲ್ಲಿ** ಉಡುಪಿ ಜಿಲ್ಲೆಯ **ಕೋಟದಲ್ಲಿ** ಜನಿಸಿದರು. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವ ಇವರು **ಚೋಮನದುಡಿ, ಮರಳಿಮಣ್ಣಿಗೆ, ಬೆಟ್ಟದ ಜೀವ, ಅಳಿದ ಮೇಲೆ,** ಹಸಿವು, ಹಾವು, ಮೂಕಜ್ಜಿಯ ಕನಸುಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಈ ಸಾಹಿತ್ಯ ಸಾಧನೆಗೆ **ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,** ಮುಂತಾದ ಪ್ರಶಸ್ತಿಗಳು ಲಭಿಸಿವೆ.

---

**29. ಕಯ್ಯಾರ ಕಿಞ್ಞಣ್ಣ ರೈ**

❖ ಕೈಯಾರ ಕಿಞ್ಞಣ್ಣರೈ ಅವರು **ಸಾ.ಶ 1915ರಲ್ಲಿ** ಕಾಸರಗೋಡು ಜಿಲ್ಲೆಯ **ಕೈಯಾರ** ಗ್ರಾಮದವರು. ಶಿಕ್ಷಕ ಪತ್ರಿಕೋದ್ಯಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿ ಹಲವಾರು ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದರು. **ಶ್ರೀಮುಖ, ಐಕ್ಯಗಾನ,** ಪುನರ್ನವ ಚೇತನ ಮತ್ತು ಕರಗ, **ಗಂಧವತಿ**–ಎಂಬ ಕವನಸಂಕಲನಗಳನ್ನು ರಚಿಸಿದ್ದಾರೆ. ಇವರಿಗೆ **ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಮತ್ತು **ನಾಡೋಜ ಪ್ರಶಸ್ತಿ** ದೊರಕಿದೆ.

---

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

**30.** ಕಾವೇರಿಯಿಂದ ಮಾಗೋ

ದಾವರಿವರಮಿರ್ದನಾಡದಾ ಕನ್ನಡದೊಳ್

| 4 | 4 | 4 |
|---|---|---|
| _ _ | U _ U | _ _ |
| ಕಾ ವೇ | ರಿ ಯಿಂದ | ಮಾ ಗೋ |

| 4 | 4 | 4 | 4 | 4 |
|---|---|---|---|---|
| _ U U | U U _ | U _ U | _ _ | U U _ |
| ದಾ ವ ರಿ | ವ ರ ಮಿ | ರ್ದ ನಾಡ | ದಾ ಕ | ನ್ನ ಡ ದೊಳ್ |

**ಈ ಮೇಲಿನ ಪದ್ಯವು ಮಾತ್ರಾಗಣದ ಕಂದಪದ್ಯದಲ್ಲಿ ರಚಿತವಾಗಿದೆ**

---

## VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1*3=3

**31. "ಸೀತೆಯ ಮುಖ ಕಮಲ ಅರಳಿತು"**

❖ **ಅಲಂಕಾರ :– ರೂಪಕಾಲಂಕಾರ.**

**ಲಕ್ಷಣ :– ಉಪಮೇಯ ಮತ್ತು ಉಪಮಾನಗಳ ನಡುವಿನ ಅಭೇಧ ಕಲ್ಪನೆಯೇ ರೂಪಕಾಲಂಕಾರ.**

**ಉಪಮೇಯ :–** ಸೀತೆಯಮುಖ

**ಉಪಮಾನ :–** ಕಮಲ

**ಸಮನ್ವಯ :–** ಇಲ್ಲಿ ಉಪಮೇಯವಾದ ಸೀತೆಯಮುಖ ಮತ್ತು ಉಪಮಾನವಾದ ಕಮಲಗಳ ನಡುವೆ ಅಭೇಧ ಕಲ್ಪನೆ ಇರುವುದರಿಂದ ರೂಪಕಾಲಂಕಾರವಾಗಿದೆ.

---

## VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3

**32. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ**

❖ ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ'** ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ'** ಒಂದಾಗಿದೆ.

ಬೆಟ್ಟವನ್ನು ದೂರದಿಂದ ನೋಡಿದಾಗ ಎತ್ತರವಾದ ಮರಗಳು, ಹಸಿರು ತಪ್ಪಲುಗಳು ಕಣ್ಣಿಗೆ ತಂಪನ್ನು ಎರೆಯುತ್ತದೆ. ಅದೇ ಹತ್ತಿರದಿಂದ ನೋಡಿದಾಗ ಬೆಟ್ಟದ ತುಂಬೆಲ್ಲಾ ಕಲ್ಲು-ಮುಳ್ಳುಗಳಿಂದ ಕೂಡಿದ್ದು ನಡೆಯಲು ಅಸಾಧ್ಯವಾಗುತ್ತದೆ. ಅದೇರೀತಿ ಸಂಬಂಧ ದೂರದಿಂದ ಚೆನ್ನಾಗಿದ್ದು, ನೋಡುವವರಿಗೆ ಚೆನ್ನಾಗಿದ್ದಾರೆಂದೆನಿಸುತ್ತದೆ. ನಾವು ಹತ್ತಿರವಾದಂತೆಯೇ ದುರ್ಗುಣಗಳು, ಅನೇಕ ದೋಷಗಳು ಕಾಣಿಸುತ್ತವೆ. ಆದ್ದರಿಂದ ಹತ್ತಿರದಿಂದಲೇ ಸೂಕ್ಷ್ಮವಾಗಿ ಗಮನಿಸಿ ಸಂಬಂಧವನ್ನು ಬೆಳೆಸಿಕೊಳ್ಳಬೇಕೆಂದು ಈ ಗಾದೆ ಸೂಚಿಸುತ್ತದೆ. ಹಾಗೇ ಸಮಾಜದಲ್ಲಿ ನಮ್ಮ ಸುತ್ತ ಮುತ್ತ ಇರುವವರು, ನಮ್ಮ ನೆಂಟರಿಷ್ಟರು ಹಸನ್ಮುಖರಾಗಿ ಇರುವುದನ್ನು ನೋಡಿ ಅವರಿಗೆ ಯಾವುದೇ ಕಷ್ಟಗಳಿಲ್ಲ, ಬರಿ ಸುಖ ಸಂತೋಷಗಳೇ ತುಂಬಿವೆ ಎಂದು ಯೋಚಿಸುವುದು ಸರಿಯಲ್ಲ. ಏಕೆಂದರೆ ಅವರಿಗಿರುವ ಕಷ್ಟ ನಮಗೆ ಗೊತ್ತಿರುವುದಿಲ್ಲ. ಆದ್ದರಿಂದ ತನಗೆ ಬಂದ ಕಷ್ಟಗಳನ್ನು ನಗುನಗುತ್ತ ಎದುರಿಸಬೇಕು, ಪ್ರಪಂಚದಲ್ಲಿ ಎಲ್ಲರಿಗು ಕಷ್ಟಬರುತ್ತದೆ ಎಂಬ ಅಂಶವನ್ನು ನೆನಪಿನಲ್ಲಿಡಬೇಕು. ಅದು ಬಿಟ್ಟು ತನಗೇ ಎಲ್ಲ ಕಷ್ಟಗಳನ್ನು ಕೊಟ್ಟಿದ್ದಾನೆ ಎಂದು ಯೋಚಿಸುವುದು ತಪ್ಪು ಎಂದೂ ಈ ಗಾದೆ ಹೇಳುತ್ತದೆ.

**ಅಥವಾ**

***-ಬೆಳ್ಳಗಿರುವುದೆಲ್ಲ ಹಾಲಲ್ಲ***

❖ ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ'** ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **'ಬೆಳ್ಳಗಿರುವುದೆಲ್ಲಾ ಹಾಲಲ್ಲ'** ಎಂಬ ಗಾದೆಯೂ ಒಂದಾಗಿದೆ.

ಆಕಾರದಲ್ಲಿ ಹೋಲಿಕೆ ಇದ್ದ ಮಾತ್ರಕ್ಕೆ ಗುಣದಲ್ಲಿ ಸಾಮ್ಯತೆ ಇರಬೇಕೆಂದೇನೂ ಇಲ್ಲ. ಎಂಬ ಅರ್ಥದಲ್ಲಿ ಈ ಗಾದೆ ಮಾತನ್ನು ಹೇಳಲಾಗಿದೆ. ಹಾಲು ಒಂದು ದ್ರವ. ತನ್ನ ಗುಣಗಳಿಂದ ಎಲ್ಲಲ್ಲೂ ಶ್ರೇಷ್ಠವಾದ ಆಹಾರವಾಗಿದೆಯೆಂದು ಪರಿಗಣಿಸಲಾಗಿದೆ. ಆದದರಿಂದಲೇ ಹಾಲನ್ನು ಅಮೃತಕ್ಕೆ ಹೋಲಿಸಿದ್ದಾರೆ. ಆದರೆ ಸುಣ್ಣದ ನೀರು ಬಿಳಿ ಬಣ್ಣವನ್ನೇ ಹೊಂದಿರುತತದೆ. ಅಂದ ಮಾತ್ರಕ್ಕೆ ಅದು ಹಾಲಾಗಲು ಸಾಧ್ಯವಿಲ್ಲ. ಹೀಗೆ ಮೇಲ್ನೋಟಕ್ಕೆ ಶ್ರೇಷ್ಠವಾಗಿ ಕಂಡರೂ ಶರೇಷ್ಠವಾಗಲು ಸಾಧ್ಯವಿಲ್ಲ. ವಜ್ರ ವಜ್ರವೇ ಹೊರತು. ಗಾಜಾಗಲು ಸಾಧ್ಯವಿಲ್ಲ. ಗುಣದಲ್ಲಿ ಶ್ರೇಷ್ಠವಾಗಿರಬೇಕೆ ಹೊರತು ಲಕ್ಷಣದಿಂದಲ್ಲ ಎಂಬುದನ್ನು ಈ ಗಾದೆ ಮಾತು ಸೂಚಿಸುತ್ತದೆ.

---

## IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18

**33. "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು."**

❖ **ಆಯ್ಕೆ :** ಈ ವಾಕ್ಯವನ್ನು '**ಶಿವರಾಮ ಕಾರಂತ**'ರು ಬರೆದಿರುವ **'ಅಬುವಿನಿಂದ ಬರಾಮಕ್ಕೆ'** ಪ್ರವಾಸ ಕಥನದ '**ಬೆಡಗಿನ ತಾಣ ಜಯಪುರ'** ಗದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಶಿವರಾಮಕಾರಂತರು 15 ವರ್ಷಗಳ ಹಿಂದೆ ಜಯಪುರದ ಅಂಬೇರಕ್ಕೆ ಭೇಟಿ ನೀಡಿದಾಗ ಅಲ್ಲಿನ ಪ್ರಾಚೀನ ಗುಡಿಗೋಪುರಗಳು ಗೂಬೆಗಳ ಮನೆಗಳಾಗಿದ್ದವು. ಆದರೆ ಈಗ ಅಲ್ಲಿ ನೂರಾರು ಸಿಂಧೀ ಕುಟುಂಬಗಳು ಮನೆ ಮಾಡಿಕೊಂಡಿವೆ ಎಂದು ಹೇಳಿದ ಸಂದರ್ಭದಲ್ಲಿ ಮಾತು ಬಂದಿದೆ.

**ಸ್ವಾರಸ್ಯ:**ಜಯಪುರ ಪ್ರವಾಸಿ ಕೇಂದ್ರವಾಗಿ ಬದಲಾದಂತೆ ಅಲ್ಲಿ ನೂರಾರು ಸಿಂಧಿ ಕುಟುಂಬಗಳಿಗೆ ಬದುಕಿಗೆ ದಾರಿಯನ್ನು ಕಲ್ಪಿಸಿದೆ ಎಂಬುದು ಇದರ ಸ್ವಾರಸ್ಯವಾಗಿದೆ.

---

**34. "ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತ ಲೇಸು"**

❖ **ಆಯ್ಕೆ:** ಈ ವಾಕ್ಯವನ್ನು **ಎನ್.ರಂಗನಾಥ ಶರ್ಮಾ**ರವರ **'ಶ್ರೀಮದ್ವಾಲ್ಮೀಕಿ ರಾಮಾಯಣಮ್'** ಕೃತಿಯ ಅಯೋಧ್ಯಕಾಂಡ ಸಂಪುಟದಿಂದ ಆಯ್ದ **'ರಾಮರಾಜ್ಯ'** ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಶ್ರೀರಾಮನು ಭರತನಿಗೆ ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು. ಏಕೆಂದರೆ ಕಷ್ಟಕಾಲದಲ್ಲಿ ಪಂಡಿತನೊಬ್ಬನೇ ಸರಿಯಾದ ಉಪಾಯವನ್ನು ಬೋಧಿಸಿಕಾರ್ಯವನ್ನು ನಿರ್ವಹಿಸಬಲ್ಲ. ಮೂರ್ಖರ ಸಂಖ್ಯೆ ಸಾವಿರವಿರಲಿ, ಹತ್ತು ಸಾವಿರವಿರಲಿ ಅವರಿಂದ ರಾಜನಿಗೆ ಯಾವ ಪ್ರಯೋಜನವೂ ಇಲ್ಲ. ಎಂದು ಹೇಳುವ ಸಂದರ್ಭವಾಗಿದೆ.

**ಸ್ವಾರಸ್ಯ:** ಇಲ್ಲಿ ಪಂಡಿತರ ಪ್ರಾಮಾಣಿಕತೆ ಮತ್ತು ಕಾರ್ಯದಕ್ಷತೆಯನ್ನು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

---

**35. "ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ"**

❖ **ಆಯ್ಕೆ:** ಪ್ರಸ್ತುತ ವಾಕ್ಯವನ್ನು ಪಠ್ಯಪುಸ್ತಕ ರಚನಾ ಸಮಿತಿ ಪ್ರಕಟಿಸಿರುವ **'ಆದರ್ಶ ಶಿಕ್ಷಕ ಸರ್ವೆಪಲ್ಲಿ ರಾಧಾಕೃಷ್ಣನ್'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ: ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಮಾಡುತ್ತಾ ಜೊತೆಗೆ ಮನೆ ಪಾಠ ಹೇಳಿ ರಾಧಾಕೃಷ್ಣನ್ ಅವರು ಹಣಗಳಿಸುತ್ತಿದ್ದರು ಮತ್ತು ತತ್ವಶಾಸ್ತ್ರದ ಉತ್ತಮ ವಿದ್ಯಾರ್ಥಿ ಎನಿಸಿದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ: ರಾಧಾಕೃಷ್ಣನ್ ಅವರು ಮನೆಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿದ್ದರೂ ಧೃತಿಗೆಡದೆ ತಮ್ಮ ಸಾಧನೆಯ ಕಡೆಗೆ ಹೆಚ್ಚು ಗಮನ ಹರಿಸಿದರು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

---

**36. "ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ"**

❖ ಆಯ್ಕೆ: ಈ ವಾಕ್ಯವನ್ನು **ಸು.ರಂ.ಎಕ್ಕುಂಡಿ** ಅವರ **'ಸಮಗ್ರ ಕಥನ ಕವನಗಳು'** ಎಂಬ ಕೃತಿಯಿಂದ ತೆಗೆದುಕೊಳ್ಳಲಾಗಿರುವ **'ಪಾರಿವಾಳ'** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಪಾರಿವಾಳಗಳ ಪುಟ್ಟಮರಿಗಳು ಬೇಡನ ಬಲೆಗೆ ಸಿಕ್ಕಿಬಿದ್ದವು. ಬಿಡಿಸಿಕೊಳ್ಳಲು ಕಿರುಚಾಡತೊಡಗಿದವು. ಬಲೆಗೆ ಸಿಲುಕಿದ ಪುಟ್ಟ ಮರಿಗಳನ್ನು ಕಂಡ ತಾಯಿ ಪಾರಿವಾಳ ತಾನೂ ಬಲೆಗೆ ಧುಮುಕಿತು. ಹೆಣ್ಣು ಪಾರಿವಾಳವನ್ನು ಬಿಟ್ಟಿರಲಾರದ ಗಂಡು ಪಾರಿವಾಳವು ಕಣ್ಣೀರಿಡುತ್ತಾ ತಾನೂ ಬಲೆಯ ಒಳಗೆ ಹೋಯಿತು. ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಜೋಡಿ ಪಾರಿವಾಳಗಳ ಕುರುಡು ವಾತ್ಸಲ್ಯವು ಇಲ್ಲಿ ಸ್ವಾರಸ್ಯವಾಗಿ ಮೂಡಿಬಂದಿದೆ.

---

**37. "ಉಭಯ ಪಕ್ಷದಲ್ಲಿ ನಿಮಗೆ ಭೇದವೆ"**

❖ ಆಯ್ಕೆ: ಪ್ರಸ್ತುತ ವಾಕ್ಯವನ್ನು ಕವಿ **ದೇವಿದಾಸ** ಅವರ ಯಕ್ಷಗಾನ ಪ್ರಸಂಗ ಪಠ್ಯ **'ಕೃಷ್ಣ ಸಂಧಾನ-ಭೀಷ್ಮಪರ್ವ'** ದಿಂದ ಆಯ್ದ, **'ಚಕ್ರ ಗ್ರಹಣ'** ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಅರ್ಜುನನು ಗಾಂಡೀವವೆಂಬ ಧನಸ್ಸಿಗೆ ಬಾಣವನ್ನು ಹೂಡಿ, ಹಿರಿಯರಾದ ಭೀಷ್ಮಾಚಾರ್ಯರ ಪಾದಗಳಿಗೆ ವಂದನೆ ಎನ್ನುತ್ತ ಬಾಣಗಳನ್ನು ಬಿಟ್ಟಾಗ, ಬಾಣಗಳೆರಡು ಬಂದು ಭೀಷ್ಮರ ಪಾದದ ಕೆಳಗಡೆ ವಂದನೆಗೈಯುತ್ತ ಬೀಳಲು, ಇದನ್ನು ಕಂಡ ಗಂಗಸುತನಾದ ಭೀಷ್ಮನು ಸಂತೋಷಗೊಂಡು, ಭೀಷ್ಮರು ಪುನಃ ಬಾಣಗಳನ್ನು ಬಿಟ್ಟಾಗ ಅರ್ಜುನನು ಗುಂಪುಗುಂಪಾಗಿ ಬಾಣಗಳನ್ನು ತುಂಡರಿಸುತ್ತ ನಗುತ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಎರಡು ಪಕ್ಷದ ಮಕ್ಕಳಲ್ಲಿ ಭೇದ ಮಾಡುವುದು ನಿಮಗೆ ಸರಿಯೇ ಎಂದು **ಅರ್ಜುನನು ಭೀಷ್ಮರನ್ನು ಪ್ರಶ್ನಿಸುವುದು** ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

---

**38. "ಬಲಿಯನಿತ್ತೊಡೆ ಮುನಿವೆಂ"**

❖ ಆಯ್ಕೆ : ಪ್ರಸ್ತುತ ವಾಕ್ಯವನ್ನು **'ಕವಿ ಚಕ್ರವರ್ತಿ ಜನ್ನ'**ನು ರಚಿಸಿದ **'ಯಶೋಧರ ಚರಿತೆ'** ಕಾವ್ಯಭಾಗದಿಂದ ಆಯ್ದ, **'ಬಲಿಯನಿತ್ತೊಡೆ ಮುನಿವೆಂ'** ಪದ್ಯದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಚಂಡಮಾರಿಯು ಪ್ರತ್ಯಕ್ಷಳಾಗಿ ಪ್ರಜೆಗಳೆಲ್ಲರೂ ನನ್ನನ್ನು ಜಲ, ಗಂಧ, ಹೂಮಾಲೆ, ಅಕ್ಕಿ, ಧೂಪ, ದೀಪ, ಹವಿಸ್ಸು, ತಾಂಬೂಲ ಸಮೂಹದಿಂದ ಪೂಜಿಸುವುದು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಚಂಡಮಾರಿಯು ಜನರಿಗೆ ಈ ಮಾತನ್ನು ಹೇಳುತ್ತಾಳೆ.

ಸ್ವಾರಸ್ಯ : ದೇವರಿಗೆ ಪೂಜೆಯನ್ನು ಮಾಡುವ ನೆಪದಲ್ಲಿ ಪ್ರಾಣಿಬಲಿ ನೀಡಿ ಪ್ರಾಣಿಹಿಂಸೆ ಮಾಡುವುದು ತಪ್ಪು ಇದನ್ನು ದೇವರು ಸಹ ಒಪ್ಪುದಿಲ್ಲ ಎಂದು ಹೇಳಿರುವುದು ಸ್ವಾರಸ್ಯವಾಗಿದೆ.

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*4=4**

**39.** ದಟ್ಟ **ಕಾಡಿನಲೊಂದು ಹೆಮ್ಮರದ ಹೊದರಿನಲಿ**

**ಇರುತಿತ್ತು ಪುಟ್ಟ ಸಂಸಾರ ಹೂಡಿ**

**ಮುದ್ದು ಬಿಳಿ ಪಾರಿವಾಳಗಳ** ಜೋಡಿ

**ಅಥವಾ**

ಹಗಲಿರುಳು **ಜೊತೆಗೂಡಿ ಬಾಳಿದವು ಈ ಜೋಡಿ**

**ಎಂದಿಗೂ ಅಗಲಿರವು ಒಂದನೊಂದು**

**ಹಿಗ್ಗು ತುಂಬಿತು ಹೊದರಿನಲ್ಲಿ** ಬಂದು

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*4=4**

**41. ಜಯಜನನಿ ಶಿರವೆತ್ತಿ ವೀರಭರವಸೆಯಿಂದ**

**ಹೊಸಹಾಡ ಕೇಳಿ ನೋಡು;**

**ಇದೋ ಮೊದಲು ಮುನ್ನಿಲ್ಲ-ಮುಗಿದುದಂದಿನ ಪಾಡು**

**ಹೊಸತಿಂದು ಹೊಸತು ಹಾಡು;**

❖ ಈ ಮೇಲಿನ ಪದ್ಯಭಾಗವನ್ನು '**ಕಯ್ಯಾರ ಕಿಞ್ಞಣ್ಣರೈ**' ಅವರು ಬರೆದ '**ಶತಮಾನದ ಗಾನ**' ಕವನ ಸಂಕಲನದಿಂದ ಆರಿಸಲಾದ '**ಹೊಸಹಾಡು**' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಬದುಕನ್ನು ನಿತ್ಯನೂತನವಾಗಿಸುವ, ಹೊಸಚೈತನ್ಯ ಮೂಡಿಸುವ, ಶಕ್ತಿ ತುಂಬುವ,ಜಗತ್ತನ್ನೇ ಬೆಳಗಿಸುವ, ಬದುಕಿನ ಗತಿಯನ್ನೇ ಬದಲಿಸುವ ಶಕ್ತಿ ಈ ಹಾಡಿಗೆ ಇದೆ.

ಜಯವನ್ನು ಹೊಂದಿದ ಮಾತೆಯೇ ನೀನು ಹೆದರದೆ ಧೈರ್ಯದಿಂದ ತಲೆ ಎತ್ತಿನೋಡು. ಹಿಂದಿನ ಪಾಡು ಹಿಂದೆಯೇ ಮುಗಿಯಿತು. ಇದೇ ಮೊದಲು. ಇದಕ್ಕಿಂತ ಮುಂಚೆ ಇಂತಹ ಹಾಡು ಇರಲಿಲ್ಲ. ಆದ್ದರಿಂದ ಇಂದು ಇದೇ ಹೊಸಹಾಡು ಎಂದು ಹೇಳುತ್ತಾ ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ.

ಇಂತಹ **ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು, ಅದು ನಿತ್ಯನೂತನವಾಗಿರಬೇಕೆಂಬುದು** ಪದ್ಯದ ಆಶಯವಾಗಿದೆ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8**

**41.ಚೋಳದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.**

❖ ದಿನೇದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನನನ್ನು ಸದೆಬಡಿಯಬೇಕೆಂದು ಶತ್ರುರಾಜರುಗಳು ಅನೇಕರು ಹವಣಿಸುತ್ತಿದ್ದರು. ಅವರಲ್ಲಿ ಚೋಳಮಂಡಳದ ಕುಲೋತ್ತುಂಗ ಪ್ರಮುಖನಾದವನು. ಕುಲೋತ್ತುಂಗ ಪ್ರಚಂಡ

ಆಶಾವಾದಿ, ಅಖಂಡ ಭರತ ಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾ ಪಿಶಾಚಿ. ಗಂಗ ಸಾಮ್ರಾಜ್ಯವನ್ನು ತನ್ನ ಕೈವಶ ಮಾಡಿಕೊಳ್ಳಲೆಂದು ಆಶಿಸಿ ಆದಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಯುದ್ಧಕ್ಕೆ ಕಳುಹಿಸಿದ. ಇದನ್ನು ಗುಪ್ತಚರರಿಂದ ತಿಳಿದು ಹೊಯ್ಸಳೇಶ್ವರನು ಸಕಲ ಸೇನಾಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾದನು. ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರ ಯಾತ್ರೆ ಹೊರಟಿತು. ಮಳವಳ್ಳಿ ಮತ್ತು ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು ಹೋಯ್ಸಳರ ಕೈಮೇಲಾಗಿ ಚೋಳಸೇನೆ ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ದಿ ತಿಳಿಯುತ್ತಲೇ ಚೋಳಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡು ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು. ಸಮಸ್ತ ಸೈನ್ಯವೂ ತಲಕಾಡುಗೊಂಡನಿಗೆ ಜಯವಾಗಲಿ ಎಂದು ವಿಷ್ಣುವರ್ಧನನ ಗುಣಗಾನ ಮಾಡಿತು.

**ಅಥವಾ**

***–ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.***

❖ ಪಂಚಾಯಿತಿಯಲ್ಲಿ ವೀರಣ್ಣ ಮತ್ತು ಈರಣ್ಣ ಒಬ್ಬರಿಗೊಬ್ಬರು ಹೊನ್ನು ತಮ್ಮದಲ್ಲ ಎಂದಾಗ ಊರಿನ ಮುಖಂಡ ಕೇತುಮಲ್ಲ ನಾಯಕನು ಇವರಿಬ್ಬರಿಗೂ ಬೇಡವಾದ ಮೇಲೆ ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಲಿ ಎಂದನು. ಇದನ್ನೆಲ್ಲಾ ಉದಯಾದಿತ್ಯನೊಡನೆ ಮರೆಯಲಿ ನಿಂತು ನೋಡುತ್ತಿದ್ದ ಮಹಾರಾಣಿ ಶಾಂತಲೆ ಕೂಡದು ಕೂಡದು ಎಂದಾಗ ಎಲ್ಲರ ಗಮನ ಅತ್ತ ಹೋಯಿತು.

ಕೇತುಮಲ್ಲನು ಗಂಡುಡುಗೆಯಲ್ಲಿದ್ದ ಶಾಂತಲೆಯನ್ನು ಗುರುತಿಸದೇ ನೀವು ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಬಾರದು ಅಂದಿರಲ್ಲ ಯಾಕೆ ? ಎಂದನು. ಅದಕ್ಕೆ ಅವಳು ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ. ಅದು ಪ್ರಜೆಗಳ ಬೆವರಿನ ಫಲ. ಆದ್ದರಿಂದ ಅದು ಪ್ರಜೆಗಳಿಗೆ ಸೇರಬೇಕು ಎಂದಳು. ಆ ಮಾತಿಗೆ ಕೇತುಮಲ್ಲನು ಹಾಗಾದರೆ ಪ್ರಜೆಗಳು ಯಾರವರು ? ಹೊಯ್ಸಳೇಶ್ವರನ ಮಕ್ಕಳಲ್ಲವೇ? ಮಕ್ಕಳ ದುಡಿಮೆ ತಂದೆಯದಲ್ಲವೇ? ಎಂದನು.

ಅವನ ವಾದವನ್ನು ಕೇಳಿದ ಶಾಂತಲೆ ನಿಮ್ಮ ಊರಿನ ಹಣ ನಿಮ್ಮ ಊರಿಗೆ ವಿನಿಯೋಗವಾಗಲಿ ಎಂದಳು. ನಂತರ ಉದಯಾದಿತ್ಯ ಅವರು ಗಂಡುಡುಗೆಯಲ್ಲಿರುವವರು ಶಾಂತಲಾದೇವಿ ಎಂದು ತಿಳಿಸಿದ ನಂತರ ಎಲ್ಲರೂ ಅವರಿಗೆ ತಮ್ಮ ಭಕ್ತಿ ಸಮರ್ಪಿಸಿದರು. ನಂತರ ಊರಿನ ಜನ ತಮಗೆ ಆ ಹೊನ್ನಿನ ಅವಶ್ಯಕತೆ ಇಲ್ಲ ಅದು ರಾಜ್ಯದ ಕ್ಷೇಮಕ್ಕೆ ಮೀಸಲು ಎಂದಾಗ ಇದು ದೈವದ ದುಡ್ಡು ದೇವರ ಕಾರ್ಯಕ್ಕೆ ವಿನಿಯೋಗವಾಗ ಬೇಕಾದ್ದು ಧರ್ಮ. ಹಾಗಾಗಿ ರಾಜಧಾನಿ ದ್ವಾರಸಮುದ್ರದಲ್ಲಿ ಹೊಯ್ಸಳರ ಶೈಲಿಯ ಮಾದರಿಯಲ್ಲಿ ಅವಳಿ ದೇವಾಲಯಗಳ ನಿರ್ಮಾಣಕ್ಕಾಗಿ ಈ ಹೊನ್ನು ವಿನಯೋಗವಾಗಲಿ ಎಂಬ ತೀರ್ಪನ್ನು ಶಾಂತಲೆ ನೀಡಿದಳು.

---

**42. ಅಭಯರುಚಿಯ ಮಾತುಗಳು ಮಾರಿದತ್ತನ ಮೇಲೆ ಬೀರಿದ ಪರಿಣಾಮವನ್ನು ತಿಳಿಸಿ.**

❖ ಮಾರಿದತ್ತನು ತಳಾರನಾದ ಚಂಡಕರ್ಮನಿಗೆ **ಮಾರಿಗೆ ನರಬಲಿ ಕೊಡುವುದಕ್ಕಾಗಿ** ಇಬ್ಬರನ್ನು ಹಿಡಿದು ತರುವಂತೆ ಹೇಳಿದನು. ಚಂಡಕರ್ಮನು ಸುದಾತ್ತಾಚಾರ್ಯ ಮುನಿಗಳೊಡನೆ ರಾಜಪುರ ಪಟ್ಟಣಕ್ಕೆ ಬಂದು ಭಿಕ್ಷೆಗೆ ಹೊರಟ್ಟಿದ್ದ ಎಳೆವಯಸ್ಸಿನ ಅಣ್ಣತಂಗಿಯರಾದ **ಅಭಯರುಚಿ ಮತ್ತು ಅಭಯಮತಿಯರನ್ನು ಹಿಡಿದು ತಂದನು**. ಅಭಯರುಚಿ ಮತ್ತು ಅಭಯಮತಿಯರು ನರಬಲಿ ನೀಡುವ ಚಂಡಮಾರಿ ದೇವಾಲಯದ ಭಯಂಕರ ದೃಶ್ಯವನ್ನು ಕಂಡು ಸ್ವಲ್ಪವೂ ವಿಚಲಿತರಾಗಲಿಲ್ಲ. **ಅಭಯರುಚಿ ಮತ್ತು ಅಭಯಮತಿಯರ ಧೈರ್ಯವನ್ನು ಕಂಡು ಮಾರಿದತ್ತನು ಬೆಕ್ಕಸಬೆರಗಾದನು**.

ಅಭಯರುಚಿಯು ಮಾರಿದತ್ತನಿಗೆ ನಾನು **ಸಂಕಲ್ಪ ಹಿಂಸೆ ಒಂದರಿಂದಲೇ ನಾನಾ ಜನ್ಮಗಳಲ್ಲಿ ದುಃಖವನ್ನು ಅನುಭವಿಸಿದೆನು**. ಆದರೆ ನೀನು ಭಯವಿಲ್ಲದೆ ಇಷ್ಟು ದೇಹಗಳನ್ನು ಕೊಲ್ಲುತ್ತಿರುವೆ. ಇದಕ್ಕೆ **ನೀನು ನರಕದಲ್ಲಿ ಪರಿಹಾರವನ್ನು ಪಡೆಯುವೆ.** ಆದ್ದರಿಂದ ನಿನಗೆ ಉಂಟಾಗುವ ಕೇಡನ್ನು ಆಲೋಚಿಸಿ ಕರುಣೆಯಿಂದ ತಲ್ಲಣಗೊಂಡನು. ಎಂದು ಹೇಳುತ್ತಾನೆ.. ಈ ಮಾತುಗಳನ್ನು ಕೇಳಿ ಮಾರಿದತ್ತನು ಹೆದರಿ **ವಿಸ್ಮಯಗೊಂಡು ಉದ್ವಿಗ್ನನಾದನು**. ಚಂಡಮಾರಿಯು ಪ್ರತ್ಯಕ್ಷಳಾಗಿ ಪ್ರಜೆಗಳೆಲ್ಲರು ನನ್ನನ್ನು **ಜಲಗಂಧ, ಹೂಮಾಲೆ, ಅಕ್ಕಿಧೂಪ, ದೀಪ, ಹವಿಸ್ಸು, ತಾಂಬೂಲ ಸಮೂಹದಿಂದ ಪೂಜಿಸುವುದು, ನನಗೆ ಜೀವಜಾತಗಳನ್ನು ಬಲಿಕೊಟ್ಟರೆ ಕೋಪಗೊಳ್ಳುವೆನು** ಎಂದು ಹೇಳಿದುದದನ್ನು ಕೇಳಿ ಮಾರಿದತ್ತನಿಗೆ ತಾನು ಅದುವರೆಗೂ ಮಾಡಿದ ಪಾಪಕೃತ್ಯಗಳಿಗಾಗಿ ಭಯವುಂಟಾಯಿತು. ಆದ್ದರಿಂದ ಮಾರಿದತ್ತನು ಕುಸುಮದತ್ತನಿಗೆ ಪಟ್ಟವನ್ನು ಕಟ್ಟಿ ರಾಜ್ಯವನ್ನು ತ್ಯಜಿಸಿದನು.

ಅಥವಾ

***–ಅಭಯರುಚಿ ಮತ್ತು ಮಾರಿದತ್ತರಲ್ಲಿ ಯಾರನ್ನು ಮೆಚ್ಚುವಿರಿ?ಏಕೆ?***

❖ ಅಭಯರುಚಿ ಮತ್ತು ಮಾರಿದತ್ತರಲ್ಲಿ ಅಭುರುಚಿಯ ಪಾತ್ರ ಮೆಚ್ಚುಗೆಯಾಗುತ್ತದೆ. ಏಕೆಂದರೆ ಹಿಂಸೆ ಮಾಡುವುದಿರಲಿ ಹಿಂಸೆಯನ್ನು ಸಂಕಲ್ಪಿಸುವುದು ಘೋರ ಪಾಪ **ಅಹಿಂಸೆ ಪರಮಧರ್ಮ ಎನ್ನುವ ನಿತ್ಯಸತ್ಯವನ್ನು ತಿಳಿಸುವ ಮೂಲಕ ಅಭಯರುಚಿಯು ಮಾರಿದತ್ತನನ್ನು ಹಿಂಸಾಮಾರ್ಗದಿಂದ ವಿಮುಖನಾಗುವಂತೆ ಮಾಡುತ್ತಾನೆ**. ಮನಃಪರಿವರ್ತನೆಗೊಂಡ ಮಾರಿದತ್ತನು ಮುಂದೆ ತನಗೆ ಬರಬಹುದಾದ ನರಕವನ್ನು ನೆನೆದು ಹೆದರಿ ಚಂಡಮಾರಿಗೆ ನರಬಲಿಯನ್ನು ನೀಡಲು ಕರೆತಂದಿದ್ದ ಜೀವರಾಶಿಗಳನ್ನು ಸೆರೆಯಿಂದ ಬಿಡಿಸುವುದರ ಮೂಲಕ ಜೀವರಕ್ಷಣೆ ಮಾಡುತ್ತಾನೆ.. ತಾನು ಅದುವರೆಗೂ ಮಾಡಿದ ಪಾಪಕಾರ್ಯಗಳಿಗೆ ಭಯಗೊಂಡು ಕುಸುಮದತ್ತನಿಗೆ ಧರಿತ್ರೀ ಪದವಿಯನ್ನು ಕೊಟ್ಟು ದೀಕ್ಷೆಯನ್ನು ಕೈಗೊಂಡನು. ಹೀಗೆ ಅಭಯರುಚಿಯು ಮಾರಿದತ್ತನಲ್ಲಿದ್ದ ದಾನವ ಗುಣವನ್ನು ಹೋಗಲಾಡಿಸಿ ದೈವತ್ವಕ್ಕೆ ಏರಿಸುತ್ತಾನೆ. ಆದ್ದರಿಂದ ಅಭಯರುಚಿಯ ಪಾತ್ರ ಮೆಚ್ಚುತ್ತೇನೆ.

---

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)**

**43. ಪ್ರಶ್ನೆಗಳು :**

**ಅ) ಬಸಯ್ಯ ಭೂಮಿಯನ್ನು ಹೇಗೆ ಹದಗೊಳಿಸಿದನು?**

❖ ಬಸಯ್ಯ ಕಡು ಬಡತನದ ಯುವಕ. ಅವನಿಗೆ ರೈತನಾಗಬೇಕೆಂಬ ಬಯಕೆ. ತಂದೆಯಿಂದ ಬಂದ ಎರಡು ಎಕರೆ ಭೂಮಿಯಿತ್ತು. ಅದೂ ಬಂಜರು, ಗುಡ್ಡಗಳಿಂದ ಕೂಡಿದ ಭೂಮಿ. ನೀರಾವರಿ ಸೌಲಭ್ಯಗಳಿಲ್ಲ. ಆದರೂ ಸಾಧಿಸುವ ಛಲವಿತ್ತು. ತನ್ನ ಭೂಮಿಯಲ್ಲಿದ್ದಗಿಡಗಂಟಿಗಳನ್ನು ತೆಗೆದ. ಅಲ್ಲಲ್ಲಿ ಇದ್ದ ಸಣ್ಣಪುಟ್ಟ ಬಂಡೆಗಲ್ಲುಗಳನ್ನು ಒಡೆಸಿ ಹೊರ ಹಾಕಿದ. ನೇಗಿಲಿನಿಂದ ಉಳುಮೆ ಮಾಡಿದ. ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿಯನ್ನು ಹದ ಮಾಡಿದನು.

---

**ಆ) ಬಸಯ್ಯ ಹೇಗೆ ಅಧಿಕ ಇಳುವರಿ ಪಡೆದನು?**

❖ ಮಳೆಗಾಲದಲ್ಲಿ ತನ್ನ ಭೂಮಿಯ ಪಕ್ಕದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕಂಡನು. ಸರ್ಕಾರದಿಂದ ಹಣ ಸಹಾಯ ಪಡೆದು ಹೊಂಡ ತೆಗೆಸಿದ. ಮಳೆನೀರನ್ನು ಸಂಗ್ರಹಿಸಿದ. ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿದ. ಸಂಗ್ರಹಿಸಿದ ಮಳೆ

ನೀರಿಗೆ ಹನಿ ನೀರಾವರಿ ಅಳವಡಿಸಿದನು. ವಿವಿಧ ಬೆಳೆ ಪದ್ಧತಿ ಅಳವಡಿಸಿಕೊಂಡನು. ದಾಳಿಂಬೆ, ಸಪೋಟ, ತೆಂಗು, ಹೂಬೆಳೆಗಳನ್ನು ಬೆಳೆದನು. ಅಧಿಕ ಇಳುವರಿ ಪಡೆದನು.

---

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

**44. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ, ಬೀದರ್‌ನ 'ಮೋಹನ್/ಮೋನಿಕಾ' ಎಂಬ ವಿದ್ಯಾರ್ಥಿ ಎಂದು ಭಾವಿಸಿಕೊಂಡು ನಿನ್ನ ವಾರ್ಷಿಕ ಪರೀಕ್ಷೆ ಸಿದ್ಧತೆ ಕುರಿತು ಚಾಮರಾಜನಗರದಲ್ಲಿರುವ ನಿಮ್ಮ ತಾಯಿಯವರಿಗೆ ಒಂದು ಪತ್ರ ಬರೆಯಿರಿ.**

**ಕ್ಷೇಮ,**

**ಇವರಿಂದ,**
ಮೋಹನ್
10ನೇ ತರಗತಿ
ಸರಕಾರಿ ಪ್ರೌಢಶಾಲೆ ಬೀದರ್
25/08/2025

**ಪೂಜ್ಯ ಮಾತೃಶ್ರೀಯವರಿಗೆ,**

ನಿಮ್ಮ ಪ್ರೀತಿಯ ಮಗನಾದ ಮೋಹನ್ ಮಾಡುವ ಶಿರ–ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯದಿಂದ ಇದ್ದೇನೆ. ನೀವು ಸಹ ಆರೋಗ್ಯವಾಗಿರುವಿರೆಂದು ತಿಳಿದುಕೊಂಡಿದ್ದೇನೆ. ಹಾಗೆಯೇ ನನ್ನ ವಿದ್ಯಾಭ್ಯಾಸವು ಸಹ ಉತ್ತಮವಾಗಿ ನಡೆಯುತ್ತಿದೆ.

ಈ ಪತ್ರವನ್ನು ಬರೆಯಲು ಕಾರಣವೇನೆಂದರೆ–ನಿಮಗೆ ತಿಳಿದ ಹಾಗೆಯೇ ಈ ವರ್ಷ ನಾನು 10ನೇ ತರಗತಿಯಲ್ಲಿ ಓದುತ್ತಿದ್ದು, ಈ ವರ್ಷ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಹೊಸ ಬದಲಾವಣೆಯನ್ನು ತಂದಿದ್ದು, ಮೂರು ವಾರ್ಷಿಕ ಪರೀಕ್ಷೆಗಳಿರುತ್ತವೆ. ಆ ಮೂರು ಪರೀಕ್ಷೆಗಳಲ್ಲಿ ನಮಗೆ ಯಾವ ಪರೀಕ್ಷೆಯಲ್ಲಿ ಉತ್ತಮ ಅಂಕಗಳು ಬಂದಿರುತ್ತವೆಯೋ ಅದನ್ನು ನಾವು ಉಳಿಸಿಕೊಳ್ಳಬಹುದು. ಆದರೆ ನಾನು ಮೊದಲ ಪರೀಕ್ಷೆಯಲ್ಲಿಯೇ ಅತ್ಯುತ್ತಮ ಅಂಕಗಳನ್ನು ಗಳಿಸಲು ಬೇಕಾದ ಸಿದ್ಧತೆಯನ್ನು ಮಾಡಿಕೊಂಡಿದ್ದೇನೆ.

ನಮ್ಮ ಶಿಕ್ಷಕರು ಹೇಳಿದ ಎಲ್ಲ ವಿಷಯವನ್ನು ಮನದಟ್ಟು ಮಾಡಿಕೊಂಡು, ಸ್ನೇಹಿತರೊಂದಿಗೆ ಚರ್ಚೆಯ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾ, ಪ್ರತಿನಿತ್ಯ ಸಮಯ ಪಾಲನೆಯೊಂದಿಗೆ ಅಭ್ಯಾಸ ಮಾಡುತ್ತಿದ್ದೇನೆ. ಅಮ್ಮ, ತಮ್ಮ ಮತ್ತು ಮನೆಯವರೆಲ್ಲರ ಆಶೀರ್ವಾದ ನನ್ನ ಮೇಲಿರಲಿ.

ಈ ವಿಷಯವನ್ನು ಮನೆಯವರಿಗೂ ತಿಳಿಸಿ, ಎಲ್ಲರನ್ನೂ ಕೇಳಿದೆ ಎಂದು ಹೇಳಿ.

**ನಮಸ್ಕಾರಗಳೊಂದಿಗೆ,**

**ಇತಿ ಪ್ರೀತಿಯ ಗೆಳೆಯ**
*ಮೋಹನ್*

**ರವರಿಗೆ,**
ರಮಣಾಬಾಯಿ
ರಾಜೇಶ್ವರಿ ನಗರ
ಚಾಮರಾಜ ನಗರ ಜಿಲ್ಲೆ–581421

➢ **ನಿಮ್ಮನ್ನು ಶಿವಮೊಗ್ಗದ ಮೊರಾರ್ಜಿ ಪ್ರೌಢಶಾಲೆಯ 'ವಿಜಯ' ಎಂಬ ವಿದ್ಯಾರ್ಥಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಕುರಿತು ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.**

**ಸ್ಥಳ : ಶಿವಮೊಗ್ಗ**
**ದಿನಾಂಕ : 12/09/2025**

**ಇವರಿಂದ,**
ವಿಜಯ
10ನೇ ತರಗತಿ

ಮೊರಾರ್ಜಿ ಪ್ರೌಢಶಾಲೆ ಶಿವಮೊಗ್ಗ

**ಇವರಿಗೆ,**

ಮಾನ್ಯ ಸಂಪಾದಕರು,

ವಿಜಯ ಕರ್ನಾಟಕ ದಿನಪತ್ರಿಕೆ ಕಾರ್ಯಾಲಯ

ಶಿವಮೊಗ್ಗ–581421

**ಮಾನ್ಯರೇ,**

**ವಿಷಯ :** ಪ್ರತಿಭಾ ಕಾರಂಜಿಯ ವರದಿಯನ್ನು ಪ್ರಕಟಿಸುವ ಕುರಿತು.

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ : 28/08/2025ರಂದು ಶಾಲಾಮಟ್ಟದ ಪ್ರತಿಭಾ ಕಾರಂಜಿಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮ ಪಂಚಾಯತನ ಅಧ್ಯಕ್ಷರು ಮತ್ತು ಸದಸ್ಯರು, ನಮ್ಮ ಶಾಲೆಯ ಶಿಕ್ಷಕರು ಮತ್ತು ವಿವಿಧ ಶಾಲೆಯಿಂದ ಬಂದಂತಹ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಂದಿನಂತೆ ಪೂರ್ವಾಹ್ನ 9:00 ಗಂಟೆಗೆ ಸಭಾ ಕಾರ್ಯಕ್ರಮವು ಪ್ರಾರಂಭವಾಯಿತು. ಸಭಾ ಕಾರ್ಯಕ್ರಮದ ನಂತರ ಪ್ರತಿಭಾ ಕಾರಂಜಿಯ ಸ್ಪರ್ಧೆಗಳು ಪ್ರಾರಂಭವಾದವು. ಜಾನಪದಗೀತೆ, ಭಾವಗೀತೆ, ಭರತ ನಾಟ್ಯ, ಭಾಷಣ ಸ್ಪರ್ಧೆಗಳು, ಹೀಗೆ ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದು, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಭಾಜನರಾಗುವ ಮೂಲಕ ಕಾರ್ಯಕ್ರಮವು ಯಶಸ್ವಿಯಾಗಿ ಸಂಪನ್ನಗೊಂಡಿತು.

ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಫೋಟೋ ಮತ್ತು ವಿವರಣೆಯನ್ನು ತಮ್ಮ ಕಛೇರಿಗೆ ಕಳುಹಿಸಿದ್ದು, ತಮಗೆ ಇಷ್ಟವಾದಲ್ಲಿ ಇವುಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಧನ್ಯವಾದಗಳೊಂದಿಗೆ,** **ಇತಿ ಪ್ರೀತಿಯ ವಿಶ್ವಾಸಿ,**

*ವಿಜಯ*

**ಇವರಿಗೆ,**
ಮಾನ್ಯ ಸಂಪಾದಕರು,
ವಿಜಯ ಕರ್ನಾಟಕ ದಿನಪತ್ರಿಕೆ ಕಾರ್ಯಾಲಯ
ಶಿವಮೊಗ್ಗ–581421

---

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. 1*5=5**

**45. ನಿರುದ್ಯೋಗ :–**

❖ **ಪೀಠಿಕೆ :–**

ನಮ್ಮ ದೇಶದಲ್ಲಿರುವ ಅನೇಕ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಯು ಒಂದು. **ಉದ್ಯೋಗ ಮಾಡಲು /ಶ್ರಮಪಡಲು ತಯಾರಾಗಿರುವ ಜನತೆಗೆ ಮಾಡಲು ಉದ್ಯೋಗ ಇಲ್ಲದೆ ಇರುವುದೇ ನಿರುದ್ಯೋಗ.** ಕಾಯಕವೇ ಕೈಲಾಸ, ದುಡಿಯುವ ಕೈಗಳಿಗೆ ಸೂಕ್ತ ಕೆಲಸವನ್ನು ಒದಗಿಸದಿದ್ದರೆ ಅದು ಮಾನವ ಶಕ್ತಿಯ ಅಪಾರ ನಷ್ಟ. ಮಾನವ ಸಂಪತ್ತು ಒಂದು ದೇಶದ ಸಂಪತ್ತು.

**ವಿಷಯ ನಿರೂಪಣೆ :–**

ಇತ್ತೀಚಿನ ದಿನಗಳಲ್ಲಿ ಉದ್ಯೋಗಕ್ಕಾಗಿ ಅಲೆಯುವವರ ಸಂಖ್ಯೆ ಮಿತಿ ಮೀರಿ ಬೆಳೆಯುತ್ತಿದೆ. ವಿಶ್ವ ವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಕೂಡಾ ಉದ್ಯೋಗಕ್ಕಾಗಿ ಅಲೆಯಬೇಕಾದ ಪರಿಸ್ಥಿತಿ ಉಂಟಾಗಿದೆ. ನಿರುದ್ಯೋಗ ಸಮಸ್ಯೆಗೆ ಮುಖ್ಯವಾದ ಕಾರಣ **ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೆಲಸ ಕಾರ್ಯಗಳಲ್ಲಿ ಯಂತ್ರೋಪಕರಣಗಳ ಬಳಕೆ.** ನಿರುದ್ಯೋಗ ಸಮಸ್ಯೆಯಿಂದ ಯುವ ಜನರು ಹಾದಿ ತಪ್ಪುತ್ತಾರೆ. ಸೋಮಾರಿಗಳಾಗುತ್ತಾರೆ.ದುಶ್ಚಟಗಳಿಗೆ ದಾಸರಾಗುತ್ತಾರೆ. **ಹಣ ಸಂಪಾದನೆಗಾಗಿ ಕಳ್ಳತನ, ಕೊಲೆ, ಸುಲಿಗೆ ದರೋಡೆ** ಮೊದಲಾದ ಸಮಾಜ ವಿರೋಧಿ ಕಾರ್ಯಗಳಲ್ಲಿ ತೊಡಗುತ್ತಾರೆ. ಹೀಗೆ ಯುವಜನತೆ ಹಾದಿ ತಪ್ಪುವುದರಿಂದ ದೇಶದಲ್ಲಿ

ಅರಾಜಕತೆ ಸೃಷ್ಟಿಯಾಗುತ್ತದೆ. ದೇಶದ ಪ್ರಗತಿ ಕುಂಠಿತವಾಗುತ್ತದೆ. ಬಡತನ ತಾಂಡವವಾಡುತ್ತದೆ. ಯುವಜನರು ನಕ್ಸಲಿಸಂ, ಭಯೋತ್ಪಾದನೆ ಸಂಘಟನೆಗಳಲ್ಲಿ ಸಕ್ರಿಯರಾಗಿರುತ್ತಾರೆ. ಹೀಗಾಗಿ ಒಂದು ದೇಶದ ಸರ್ಕಾರ ಮತ್ತು ಅಲ್ಲಿನ ಜನತೆ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವತ್ತ ತೀವ್ರವಾಗಿ ಗಮನಹರಿಸಬೇಕು. ಗ್ರಾಮೀಣ ಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟು ಅಭಿವೃದ್ಧಿ ಹೊಂದಲು ಅವಕಾಶ ಮಾಡಿಕೊಡಬೇಕು. ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಬೇಕು. ಶಾಲಾ ಹಂತದಲ್ಲಿಯೇ ವೃತ್ತಿಪರ ಶಿಕ್ಷಣವನ್ನು ಒದಗಿಸಬೇಕು. ಯುವಜನರು ಸ್ವಯಂ ಉದ್ಯೋಗ ಮಾಡಲು ಉಚಿತ ಸ್ಥಳಾವಕಾಶ, ಸಾಲಸೌಲಭ್ಯ, ತೆರಿಗೆ ರಿಯಾಯಿತಿ,ಸೂಕ್ತ ಮಾರುಕಟ್ಟೆ ಸೃಷ್ಟಿಸುವ ಕಾರ್ಯವನ್ನು ಸರ್ಕಾರ ಮಾಡಿಕೊಡಬೇಕು. ಗ್ರಾಮೀಣ ಮಟ್ಟದಲ್ಲಿ ಉದ್ಯೋಗ ಕಾರ್ಯವನ್ನು ಮಾಡುವುದರ ಮುಖಾಂತರ ಪಟ್ಟಣಕ್ಕೆ ಉದ್ಯೋಗಕ್ಕಾಗಿ ವಲಸೆ ಬರುವುದನ್ನು ತಡೆಗಟ್ಟಬೇಕು. ಸರ್ಕಾರದಲ್ಲಿರುವ ಲಂಚಕೋರತನ, ಭ್ರಷ್ಟಾಚಾರ ನಿರ್ಮೂಲನೆಮಾಡಬೇಕು.

**ಉಪಸಂಹಾರ :–**

ಜನತೆಯ ಜ್ಞಾನದ ಮಟ್ಟ ವಿದ್ಯಾರ್ಹತೆ, ಅನುಭವಕ್ಕೆ ತಕ್ಕ ಉದ್ಯೋಗಗಳನ್ನು ಒದಗಿಸಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಟ್ಟಾಗ ಜನತೆ ಸಂತೋಷದಿಂದ ಪ್ರಾಮಾಣಿಕರಾಗಿ ತಮ್ಮ ಉದ್ಯೋಗದಲ್ಲಿ ಪ್ರಗತಿ ಸಾಧಿಸುತ್ತಾರೆ. ಆಗ ರಾಷ್ಟ್ರವೂ ತಾನೇ ತಾನಾಗಿ ಈ ಸಮಸ್ಯೆಗಳಿಂದ ಬಿಡುಗಡೆ ಹೊಂದಿ ಪ್ರಗತಿ ಹೊಂದುತ್ತದೆ.

***ಅಥವಾ***

***–ರಾಷ್ಟ್ರೀಯ ಭಾವೈಕ್ಯತೆ :–***

- **ಪೀಠಿಕೆ:–**

ಭಾರತವು ಅನೇಕ ಜನಾಂಗಗಳು, ಪಂಗಡಗಳು ಇರುವಂತಹ ಒಂದು ವಿಶಾಲ ರಾಷ್ಟ್ರ. ಇಲ್ಲಿ "ವಿವಿಧ ಭಾಷೆ, ಸಂಸ್ಕೃತಿ, ಧರ್ಮ , ಜಾತಿಗಳ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೊಂದಿರುವುದೇ 'ರಾಷ್ಟ್ರೀಯ ಭಾವೈಕ್ಯತೆ". ಭಾರತವು ಪ್ರಜಾಪ್ರಭುತ್ವ ತಳಹದಿಯ ಮೇಲೆ ರೂಪಿತವಾಗಿರುವ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು ಪ್ರತಿಯೊಂದು ಧರ್ಮೀಯರು ತಮ್ಮ ಸಂಪ್ರದಾಯ,ಪದ್ಧತಿಗಳನ್ನು ಅಚರಿಸಲು ಅವಕಾಶವಿದೆ.

**ವಿಷಯ ನಿರೂಪಣೆ:–**

ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊದಿಂದ್ದು,ದೇಶದ ಯಾವುದೇ ಮೂಲೆಗೆ ಹೋದರು ಅಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಏಕೆಂದರೆ ಭಾರತೀಯ ನಾಗರಿಕತೆಯು ಯಾವಾಗಲೂ ಧಾರ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ಚಲಿಸುತ್ತಿದೆ. ದೇಶದ ಎಲ್ಲ ಭಾಗಗಳಲ್ಲಿಯೂ, ಸಾಂಸ್ಕೃತಿಕ ಮತ್ತು ಜೀವನ ಮಾರ್ಗದ ಒಗ್ಗಟ್ಟು ಹಾಗೂ ದೃಷ್ಟಿಕೋನವು ಧರ್ಮ,ನಂಬಿಕೆ ಮತ್ತು ಆಚರಣೆಗಳಲ್ಲಿ ವಿಶಾಲ ವೈವಿಧ್ಯತೆಯನ್ನು ಹೊಂದಿದೆ. ಆದರೂ ನಮ್ಮಲ್ಲಿ ನಾವು ಭಾರತೀಯರು ಎಂಬ ಬಲವಾದ ಬೇರಿದೆ.

ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಗೀತೆ, ರಾಷ್ಟ್ರಭಾಷೆ, ರಾಷ್ಟ್ರಮುದ್ರೆ ಇವು ನಮ್ಮ ಏಕತೆಯ ಸಂಕೇತಗಳಾಗಿವೆ. ಅಲ್ಲದೇ 'ವಂದೇಮಾತರಂ, ಸಾರೇ ಜಹಾಸೇ ಅಚ್ಛಾ, ಜನಗಣಮನ ಅಧಿನಾಯಕ' ದಂತಹ ದೇಶ ಭಕ್ತಿಗೀತೆಗಳು ನಮ್ಮಲ್ಲಿ ದೇಶಪ್ರೇಮ, ದೇಶಾಭಿಮಾನವನ್ನು ಹುಟ್ಟಿಸುತ್ತವೆ. ಇಡೀ ದೇಶವೇ ವೈವಿಧ್ಯಮಯವದ ಸಂಸ್ಕೃತಿಕ ಆಚರಣೆಯಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು.

**ಉಪಸಂಹಾರ :–**

ಇತ್ತೀಚೆಗೆ ಭಾರತೀಯ ಸಂಸ್ಕೃತಿಯು ಪ್ರಗತಿ ಹಾಗೂ ಬದಲವಣೆಯ ಹಂತದಲ್ಲಿದೆ . ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯ ಗಾಳಿಯು ಇಡೀ ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಮಾತ್ರ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ಧತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.